ಸಾಕ್ಷಿಯನ್ನು ದಿಃ 23-01-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ.ಎಸ್ ಎಮ್ ಹೆಚ್ ವಕೀಲರಿಂದ( ಪ್ರತಿವಾದಿಯರ ಪರ)**

ನಾನು ಲಕ್ಕುಂಡಿಯಲ್ಲಿ ಪಿ.ಯು.ಸಿ., ವರೆಗೆ ಓದಿದ್ದೇನೆ. ನನಗೆ 4 ಜನ ಸಹೋದರರಿದ್ದು ಅವರೆಂದರೆ ಪ್ರಕಾಶ, ಅಜ್ಜಪ್ಪ, ರಮೇಶ ಹಾಗೂ ಗುರುಶಾಂತ. ಪ್ರತಿವಾದಿ ನಿವೃತ್ತ ಸರ್ಕಾರಿ ನೌಕರ ಎಂದರೆ ಸರಿ. ಪ್ರತಿವಾದಿಯ ಗಂಡ ಸಹ ಸರ್ಕಾರಿ ನೌಕರರಾಗಿದ್ದರು ಎಂದರೆ ಸರಿ. ಪ್ರತಿವಾದಿಯ ಮಗಳು High School ಶಿಕ್ಷಕರಾಗಿದ್ದಾರೆ ಮತ್ತು ಮಗ Software Engineer ಆಗಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗೆ ನೋಟೀಸ ಕೊಡುವಾಗ ಹಾಗೂ ವಾದ ಪತ್ರ ಬರೆಯುವಾಗ ನಾನು ದಾವಾ ಆಸ್ತಿಯ ಉತಾರೆ ನೀಡಿದ್ದೆ. ನಿಪಿಃ2 ರಲ್ಲಿ ದಾವಾ ಆಸ್ತಿಯ ಉತ್ತರಕ್ಕೆ-ವೀರಭದ್ರಪ್ಪ ಕವಲೂರ ಇವರ ಆಸ್ತಿ, ಪೂರ್ವಕ್ಕೆ-ನಿಯತಾಭಿ ನಧಾಪ ಇವರ ಆಸ್ತಿ, ಪಶ್ಚಿಮಕ್ಕೆ-ರಸ್ತೆ, ದಕ್ಷಿಣಕ್ಕೆ-ವೀರುಪಾಕ್ಷಯ್ಯ ಕುಲಕರ್ಣಿ ಇವರ ಆಸ್ತಿ ಎಂದು ಇದೆ ಎಂದರೆ ಸರಿ. ನಿಪಿಃ3 ನೊಟೀಸಿನಲ್ಲಿ ದಾವಾ ಆಸ್ತಿಯ ಚಕಬಂದಿಯಲ್ಲಿ ಪೂರ್ವಕ್ಕೆ-ಮಾಲಾ ಇವರ ಮನೆ, ಪಶ್ಚಿಮಕ್ಕೆ-ರಸ್ತೆ, ಉತ್ತರಕ್ಕೆ-ವೀರಭದ್ರಪ್ಪ ಕಲವಲೂರ, ದಕ್ಷಿಣಕ್ಕೆ-ಶಂಕರಯ್ಯ ಕುಲಕರ್ಣಿ ಇವರ ಆಸ್ತಿ ಇದೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿಃ2 ಮತ್ತು 3 ರಲ್ಲಿ ತೋರಿಸಿದ ಚಕಬಂದಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

ಪ್ರತಿವಾದಿ ಮನೆ ಮಾರಾಟಕ್ಕೆ ಇಟ್ಟಿದ್ದಾರೆ ಎಂದು 2021 ರಲ್ಲಿ ಸುರೇಶ ಕವಲೂರು ಎನ್ನುವವರು ನನಗೆ ಹೇಳಿದ್ದರು. ಅವರು ಹೇಳಿದ ದಿನಾಂಕ, ತಿಂಗಳು ನೆನಪಿಲ್ಲ. ವಚನ ಪತ್ರ ಮಾಡುವ ಎರಡು ದಿನ ಮೊದಲು ನಾನು ಹಾಗೂ ಸುರೇಶ ಕವಲೂರು ಪ್ರತಿವಾದಿಗೆ ಭೇಟಿಯಾಗಿ ಮನೆ ಖರೀದಿಸುವುದಾಗಿ ಹೇಳಿದೆವು. ಆ ಸಮಯದಲ್ಲಿ ಪ್ರತಿವಾದಿಯ ಮಗ ಅವರೊಂದಿಗೆ ಇದ್ದ. ದಿಃ19.04.2021 ರಂದು ಆಸ್ತಿಯ ರೇಟ್ ಮಾತಾಡಿ ವಚನ ಕಾಗದ ಬರೆಸಿದೆವು. ದಾವಾ ಆಸ್ತಿಯ ಉತ್ತರಕ್ಕೆ-ವೀರಭದ್ರಪ್ಪ ಕವಲೂರ ರವರ ಮನೆ ಇದೆ. ಸದರಿ ಕಾಳಪ್ಪ ವೀರಭದ್ರಪ್ಪ 01.06.2023 ರಲ್ಲಿ ಸದರಿ ಮನೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಈಗ ಸಾಕ್ಷಿಗೆ ದಿಃ01.06.2023 ರಂದು ಕಾಳಪ್ಪ ವೀರಭದ್ರಪ್ಪ ಕವಲೂರ ಇವರು ಮನೆ ಸಂಖ್ಯೆ-1580/ಬಿ(17)2 ಮನೆಯನ್ನು ಚೆನ್ನಪ್ಪ ಮಲ್ಲಪ್ಪ ಹಂಬಿಗೆ ಇವರಿಗೆ ಮಾರಾಟ ಮಾಡಿದ ಬಗ್ಗೆ ವಚನ ಪತ್ರ ತೋರಿಸಿದ್ದು, ಅದನ್ನು

ಗುರುತಿಸಲು ಸಾಕ್ಷಿ ನಿರಾಕರಿಸಿದ್ದು ಅಲ್ಲದೇ ಅದು ಝುರಾಕ್ಸ್ ಪ್ರತಿಯಾರಿರುವುದರಿಂದ ಗುರುತಿಸಲಾಗಿಲ್ಲ.

ನಿಪಿಃ1 ನ್ನು ಬರೆಸಲು ಪ್ರತಿವಾದಿಯ ಮನೆಗೆ ನಾನು, ಸುರೇಶ ಕವಲೂರು, ಚಂದ್ರಶೇಖರ ಚಬ್ಬರಭಾವಿ ಹಾಗೂ ನನ್ನ ಅಣ್ಣ ಪ್ರಕಾಶ ಅರಹುಣಸಿ ಹೋಗಿದ್ದೇವು. ಆಗ ಮಧ್ಯಾಹ್ನ 01.30 ರಿಂದ 02-00 ಗಂಟೆಯಾಗಿತ್ತು. ಅದೇ ಸವಯದಲ್ಲಿ ಖರೀದಿ ಮಾತುಕತೆಯಾಯಿತು. ಮೊದಲು ಪ್ರತಿವಾದಿ ದಾವಾ ಆಸ್ತಿಗೆ ರೂ.9 ಲಕ್ಷ ಹೇಳಿದರು. ಮಾತುಕತೆ ನಂತರ ರೂ.7 ಲಕ್ಷ 35 ಸಾವಿರಗಳಿಗೆ ಒಪ್ಪಿಗೆಯಾಯಿತು. ನಿಪಿಃ1 ನ್ನು ಪ್ರತಿವಾದಿಯ ಮನೆಯಲ್ಲಿಯೇ ಬರೆಯಲಾಯಿತು. ನಾವು ಪ್ರತಿವಾದಿಯ ಮನೆಗೆ ಹೋಗಿದ್ದೆವು, ಅಲ್ಲಿ ಖರೀದಿ ಮಾತುಕತೆಯಾಯಿತು ಮತ್ತು ನಿಪಿಃ1 ನ್ನು ಬರೆಯಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪ್ರತಿವಾದಿಗೆ ರೂ.2 ಲಕ್ಷ ಕೊಟ್ಟಿದ್ದು, ಆ ಹಣವನ್ನು ನಾನು ಮನೆಯಿಂದ ಒಯ್ದಿದ್ದೆ. ನಾನು ಹೂ ಮಾರಾಟ ಮಾಡಿ ಹಣವನ್ನು ಕೂಡಿಸಿ ಇಟ್ಟಿದ್ದೆ. ನಾನು ಹೂ ಮಾರಾಟ ಮಾಡಿದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಿಪಿಃ1 ನ್ನು ಬರೆಯಲು ಪ್ರತಿವಾದಿಯೇ ಚಾಪಾ ಕಾಗದ ತರಿಸಿದ್ದರು. ಯಾರೂ ಹೋಗಿ ಚಾಪಾ ಕಾಗದ ತಂದಿದ್ದರು ಗೊತ್ತಿಲ್ಲ. ಪ್ರತಿವಾದಿ ಮನೆಯಲ್ಲಿ ಒಬ್ಬರೇ ಇರುತ್ತಾರೆ ಎಂದರೆ ನಾವು ಹೋದಾಗ ಅವರ ಮಗ ಸಹ ಇದ್ದರು ಎಂದು ಹೇಳುತ್ತಾರೆ. ನಿಪಿಃ1 ರಲ್ಲಿ ಸಹಿ ಮಾಡುವ ಹಿಂಭಾಗದಲ್ಲಿ X ಗುರುತು ಹಾಕಲಾಗಿದೆ ಎಂದರೆ ಸರಿ. ಖಾಲಿ ಹಾಳೆಯಲ್ಲಿ ಪ್ರತಿವಾದಿ ಮತ್ತು ಸಾಕ್ಷಿದಾರರ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಗಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.